ಮ್ಯಾನೇಜರ್ ಅವರ ಅಂಥ ಮಗ, ತಮ್ಮಿಂದ ಯಾವ ಸಹಾಯವನ್ನೂ ತೆಗೆದುಕೊಳ್ಳದೆ, ಸ್ವಯಂ ಉದ್ಯೋಗಿಯಾಗಿ ತನ್ನ ಕಾಲ ಮೇಲೆ ನಿಂತಿದ್ದಾನೆ ಎಂಬುದು ಅವರಿಗೆ ಅಭಿಮಾನದ ಸಂಗತಿಯಾಗಿತ್ತು. ಹಾಗೆಂದೇ ಅವರೆಲ್ಲರೂ ಭಾವೇಶ್ ಅವರೊಡನೆ ಬಹಳ ಒಳ್ಳೆಯ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರು. ಆದರೆ ಪ್ರಕಾಶ್ ಭಾಯಿ ಅವರ ಧರ್ಮಪತ್ನಿ ಮಾಲತೀ ಮರ್ಚೆಂಟ್ ಅವರಿಗೆ ಆರ್.ಕೆ.ವಾಡಿಯಲ್ಲಿ ಈ ಮೋಂಬತ್ತಿ ಕೆಲಸ ನಡೆಯುವುದು ಇಷ್ಟವಾಗಿರಲಿಲ್ಲ. ಭಾವೇಶ್ ಅಂಥ ಭಿಕ್ಷುಕರನ್ನು ಕರೆದುಕೊಂಡು ಆರ್.ಕೆ.ವಾಡಿಗೆ ಬಂದಾಗ, ಅದೇ ದಿನ ಅಚಾನಕ್ ಮಾಲತೀ ಅವರು ಮುಂಬಯಿಯಿಂದ ಮಹಾಬಲೇಶ್ವರಕ್ಕೆ ತಡ ರಾತ್ರಿ ಆಗಮಿಸಿದ್ದರು. ಭಾವೇಶ್ ಅವರೊಡನೆ ಈ ಅಂಧ ಭಿಕ್ಷುಕರನ್ನು ಇಲ್ಲಿ ನೋಡಿ ಅವರಿಗೆ ಅಸಮಾಧಾನವಾಗಿತ್ತು.

ಒಂದು ತಿಂಗಳ ಒಳಗೆ ತಮ್ಮ ವರ್ಕ್‌ಶಾಪ್ ಅನ್ನು ಬೇರೆಲ್ಲಿಗಾದರೂ ವರ್ಗಾಯಿಸಲೇಬೇಕೆಂದು ಅವರು ಸ್ಪಷ್ಟವಾಗಿ ಹೇಳಿಬಿಟ್ಟಿದ್ದರು. ಆ ಕ್ಷಣ ಭಾವೇಶ್ ಅವರಿಗೆ ಬಹಳ ದುಃಖವಾಗಿತ್ತು. ಆರ್.ಕೆ.ವಾಡಿಯ ಯಾವುದೇ ವಸ್ತುವನ್ನು ಭಾವೇಶ್ ಬಳಸುತ್ತಿರಲಿಲ್ಲ. ಆ ಸಣ್ಣ ಕೋಣೆಯ ಒಂದು ಮೇಜಿನ ಮೇಲೆ ಅವರ ಎಲ್ಲ ಮೋಂಬತ್ತಿಗಳು ತಯಾರಾಗುತ್ತಿದ್ದವು. ಅದು ಅವರಿಗೆ ಜೀವನೋಪಾಯವನ್ನು ಒದಗಿಸಿತ್ತು. ಭಾವೇಶ್ ಕೂಡಾ ಆರ್.ಕೆ.ವಾಡಿಗೆ ಬರುವ ಪ್ರತಿ ಗ್ರಾಹಕರಿಗೆ ಅವರ ಉದಾರತೆಯ ಬಗ್ಗೆ ಕೃತಜ್ಞತೆಯಿಂದ ಹೇಳುತ್ತಿದ್ದರು. ಬಹುಶಃ ಮಾಲತೀ ಅವರಿಗೆ ಭಾವೇಶ್ ಅವರದು ಸನ್ಯಾಸಿಯ ಸಂಸಾರದಂತೆ ಕಂಡಿರಬೇಕು. ಅಂದು ಶ್ರೀಮತಿ ಮರ್ಚೆಂಟ್ ಅವರ ಮಾತುಗಳನ್ನು ಕೇಳಿದ ಮೇಲೆ ಸ್ವಾಭಿಮಾನಿಯಾದ ಭಾವೇಶ್ ತಮ್ಮ ವರ್ಕ್‌ಶಾಪ್‌ಗೆ ಬೇರೆ ಜಾಗ ಹುಡುಕುತ್ತಿದ್ದರು. ಮೂರ್ನಾಲ್ಕು ದಿನಗಳಲ್ಲಿ ಸಂದೀಪ್ ಅವರ ಆರು ಕೋಣೆಗಳು ಒದಗಿಬಂದಿದ್ದವು.

ಆ ದಿನಗಳು ಇಷ್ಟೆಲ್ಲ ವರ್ಕ್‌ಶಾಪ್‌ನ ವಸ್ತುಗಳನ್ನು ಹೇಗೆ ವರ್ಗಾಯಿಸುವುದು ಎಂಬ ಚಿಂತೆಯೂ ಕಾಡಿತ್ತು. ಇದೇ ಸಮಯದಲ್ಲಿ ರೇಡಿಯೋದಲ್ಲಿ ಟಾಟಾ ಮೋಟರ್ಸ್‌ನ ಕುರಿತು ಒಂದು ಸುದ್ದಿ ಕೇಳಿದರು. ರೈತರ ಆಂದೋಲನದ ಕಾರಣವಾಗಿ ರತನ್ ಟಾಟಾ ಅವರಿಗೆ ಸುಮಾರು ಒಂದು ಸಾವಿರ ಎಕರೆಗಳಲ್ಲಿ ಸಿಂಗೂರ್‌ನಲ್ಲಿ ಹರಡಿದ್ದ ತಮ್ಮ ನ್ಯಾನೋ ಕಾರಿನ ಕಾರ್ಖಾನೆಯನ್ನು ಪಶ್ಚಿಮ ಬಂಗಾಲದಿಂದ ಎತ್ತಿಕೊಂಡು, ಗುಜರಾತಿನ ಸಾನಂದ್‌ಗೆ ವರ್ಗಾಯಿಸಬೇಕಾಯಿತು. ಇದನ್ನು ಯೋಚಿಸಿದಾಗ ಭಾವೇಶ್ ಅವರಿಗೆ ಪ್ರೇರಣೆ ಸಿಕ್ಕಿತು. ಅವರು ಅಷ್ಟು ದೊಡ್ಡ ಕಾರ್ಖಾನೆಯನ್ನೇ ಇಷ್ಟು ದೂರಕ್ಕೆ ವರ್ಗಾಯಿಸಿದರು ಎಂದರೆ, ನನಗೆ ನನ್ನ ಪುಟ್ಟ ವರ್ಕ್‌ಶಾಪ್ ಅನ್ನು ಸಿಂದೋಡಾಗೆ ತೆಗೆದುಕೊಂಡು ಹೋಗುವುದು ಏಕೆ ಕಷ್ಟವಾಗಬೇಕು? ಎಂದು ಯೋಚಿಸಿದರು. ಹೊಸ ಹುರುಪಿನಿಂದ ಎಲ್ಲವೂ ರವಾನೆಯಾಯಿತು.



## ಇಲ್ಲಿಯವರೆಗೆ

ಭಾವೇಶ್ ಅವರ ಪ್ರತಿಭೆ ಮತ್ತು ಶ್ರಮವನ್ನು ಪುಣೆಯಲ್ಲಿನ ಮೋಂಬತ್ತಿಗಳ ಪ್ರದರ್ಶನ ಕನ್ನಡಿ ರೂಪದಲ್ಲಿ ಜಗತ್ತಿಗೆ ಪರಿಚಯಿಸಿತು. ಭಾವೇಶ್ ಒಮ್ಮೆಗೇ ಪ್ರಸಿದ್ಧ ವ್ಯಕ್ತಿಯಾಗಿ ರೂಪುಗೊಂಡರು. ಅವರ ಬದುಕಿನ ಛಲ, ಕ್ಯಾನ್ಸರ್‌ನಿಂದಾಗಿ ಖಿನ್ನತೆಗೊಳಗಾಗಿದ್ದ ಮಹಿಳೆಯಲ್ಲಿ ಜೀವನಪ್ರೀತಿಯನ್ನು ಚಿಗುರಿಸಿತು. ತಮ್ಮ ಬದುಕು ವೈಯಕ್ತಿಕ ಪರಿಧಿಯನ್ನು ಮೀರಿ, ನೊಂದ ಅನೇಕರಿಗೆ ಸ್ಫೂರ್ತಿ ನೀಡುತ್ತಿರುವುದು ಭಾವೇಶ್‌ರ ಅರಿವಿಗೂ ಬಂತು. ಎತ್ತರಕ್ಕೆ ಏರಿದಂತೆಲ್ಲ ಅವರು ಮತ್ತಷ್ಟು ವಿನಯ ಮೈಗೂಡಿಸಿಕೊಳ್ಳುತ್ತಾ ಹೋದರು. ಉದ್ಯಮದಲ್ಲಿನ ಯಶಸ್ಸಿನ ನಡುವೆಯೂ ಶಾಲಾ–ಕಾಲೇಜು ದಿನಗಳಲ್ಲಿನ ಕ್ರೀಡಾಸಕ್ತಿಯನ್ನು ಮರೆತಿರಲಿಲ್ಲ. ಕ್ರೀಡಾಕೂಟಗಳಲ್ಲಿ ಭಾಗವಹಿಸಿ ರಾಜ್ಯ, ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ಗೆಲುವು ಕಂಡರು. ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲೂ ಅವಕಾಶ ದೊರೆಯಿತು.

ಸಿಂದೋಡಾದಲ್ಲಿ ಹೊಸ ಬದುಕು ಆರಂಭವಾಯಿತು.

ಅಂಧರ ನೆಟ್‌ವರ್ಕ್ ಬಹಳ ವೇಗವಾಗಿ ಕೆಲಸ ಮಾಡಿತ್ತು. ಮಹಾಬಲೇಶ್ವರದಲ್ಲಿ ದಿನಕ್ಕೆ 200 ರೂಪಾಯಿ ಕೊಟ್ಟು, ಇರಲು ಜಾಗ ಕೊಟ್ಟು, ಊಟ ಉಪಚಾರ ನೋಡಿಕೊಳ್ಳುವಂತಹ ಒಂದು ಮೋಂಬತ್ತಿ ಕಂಪನಿ ಇದೆ ಎಂಬ ಸುದ್ದಿ ಬಲು ಶೀಘ್ರವಾಗಿ ಸುತ್ತಲೂ ಹರಡಿತ್ತು. ಮಾಡಬೇಕಾದ ಕೆಲಸವಾದರೂ ಏನು? ನೆರಳಿನಲ್ಲಿ ಕುಳಿತು, ಹಾಡು ಕೇಳುತ್ತಾ ಮೋಂಬತ್ತಿ ಮಾಡುವುದನ್ನು ಕಲಿತು ತಯಾರಿಸಬೇಕು ಅಷ್ಟೆ. ಇದೀಗ ಬಹಳಷ್ಟು ದೃಷ್ಟಿಹೀನರು ಬಂದು ಕೈ ಜೋಡಿಸಿದರು.

ಐದು ಜನರಿದ್ದವರು, ನೋಡನೋಡುತ್ತಿದ್ದಂತೆ ಇಪ್ಪತ್ತೈದು ಜನರಾದರು. ಇವರೆಲ್ಲರನ್ನು ಸಂಭಾಳಿಸುವುದು ಸುಲಭವಿರಲಿಲ್ಲ, ಸರಳವಿರಲಿಲ್ಲ. ಸುಮಾರು 3040 ಕಿ.ಮೀ. ದೂರದ ಹಳ್ಳಿಗಳಿಂದ ಬಂದ ದೃಷ್ಟಿಹೀನರೂ ಇದ್ದರು. ಸಿಂದೋಡಾದ ವರ್ಕ್‌ಶಾಪ್‌ನಲ್ಲಿ ಕೆಲಸ ಮಾಡಲು, ಕೆಲಸ ಕಲಿಯಲು ಯಾವ ನಿರ್ಬಂಧಗಳಿರಲಿಲ್ಲ. ಆದರೆ ಜಾಗದ ಮಿತಿಯಿತ್ತು. ಯಾವ ಅಂಧರಿಗೆ ಮನೆ–ಮಠ ಇರಲಿಲ್ಲವೋ ಅವರಿಗೆ ಸಿಂದೋಡಾದಲ್ಲಿ ಇರಲು ಜಾಗ ಮತ್ತು ಊಟದ ವ್ಯವಸ್ಥೆ ಮಾಡಿದರು. ಉಳಿದವರಿಗೆ ಅವರ ಹಳ್ಳಿಗಳಿಂದ ಪ್ರತಿ ದಿನ ಬಂದು ಹೋಗುವ ವ್ಯವಸ್ಥೆ ಮಾಡಿದರು. ಈ ಮೋಂಬತ್ತಿ ತಯಾರಿಸುವ ತರಪೇತನ್ನು ಪಡೆಯುತ್ತಾ ಶೀಘ್ರವಾಗಿಯೇ ಆ ಎಲ್ಲ ಅಂಧರು ಬಹಳ ನಿಪುಣರಾದರು. ಭಾವೇಶ್ ಅವರ ಪ್ರೊಡಕ್ಷನ್ ಹೆಚ್ಚಾಗಿತ್ತು, ಬಹಳಷ್ಟು ಮೋಂಬತ್ತಿಗಳು ತಯಾರಾಗುತ್ತಿದ್ದವು. ಆದರೆ ಮಾರಾಟಕ್ಕೆ ಇದ್ದದ್ದು ಅದೇ ಮಾರ್ಕೆಟ್ಟಿನ ಒಂದು ಸ್ಟಾಲ್. ಆನಂದ್ ವನ್ ಭುವನದ ಸ್ಟಾಲ್, ಅಲ್ಲಿ ಬಂದ ಅತಿಥಿಗಳಿಗೆ ಮಾತ್ರ ತಲುಪುತ್ತಿತ್ತು. ಇದರಿಂದಾಗಿ ಮೋಂಬತ್ತಿಗಳು ರಾಶಿ ರಾಶಿ ತಯಾರಾಗಿ ಗುಡ್ಡೆಯಾದವು. ಆದರೆ ಅಷ್ಟೊಂದು ಸಂಖ್ಯೆಯಲ್ಲಿ ಮಾರಾಟ ಮಾಡಲು ಆಗುತ್ತಿರಲಿಲ್ಲ. ಜೊತೆಗೆ ಅಷ್ಟೆಲ್ಲ ಜನರ ಊಟ ವಸತಿಯ ಚಿಂತೆ ಭಾವೇಶ್ ಅವರನ್ನು ಕಾಡಿತು. ತಾವು ಆರಂಭಿಸಿದ ಈ ಸಮಾಜಸೇವೆ ಬಹಳ ದಿನ ನಡೆಯಲಾರದು ಅನಿಸಿ ಮನಸ್ಸಿಗೆ ನೋವಾಗತೊಡಗಿತು.

‘ಹಾಸಿಗೆ ಇದ್ದಷ್ಟೇ ಕಾಲು ಚಾಚು’ ಎನ್ನುವುದು ಗುರುಹಿರಿಯರು ಹೇಳಿಕೊಟ್ಟ ಮಾತು. ತಾನೂ ಕೂಡಾ ತನ್ನ ಹಾಸಿಗೆ ಇದ್ದಷ್ಟೇ ಕಾಲು ಚಾಚಬೇಕಿತ್ತು ಎಂದುಕೊಳ್ಳುತ್ತಿದ್ದಂತೆ, ಮನದ ಮೂಲೆಯಿಂದ ದನಿ ಕೇಳಿತ್ತು – ಅರೆ ಹಾಸಿಗೆ ಹೊದ್ದಿಕೆಗಾಗಿ ಸಜೀವ ಕಾಲುಗಳನ್ನೇಕೆ ಮುದುಡಿ ಕಷ್ಟ ಪಡಬೇಕು. ಕಾಲು ಇದ್ದಷ್ಟು ಉದ್ದದ ಹಾಸಿಗೆಯನ್ನು ತಯಾರಿಸಲು ನಾನು ಕಲಿಯಬೇಕು. ಈ ವಿಚಾರ ಮನಸ್ಸಿಗೆ ಬಂದೊಡನೆ, ಭಾವೇಶ್ ಅವರಿಗೆ ಮತ್ತೆ ಉತ್ಸಾಹ ಮೂಡಿತು. ಈಗ ಹಾಸಿಗೆ, ಹೊದ್ದಿಕೆಗಳನ್ನೇ ದೊಡ್ಡದು ಮಾಡುವ ಮಾರ್ಗಗಳನ್ನು ಯೋಚಿಸತೊಡಗಿದರು. ದೃಷ್ಟಿಬಾಧಿತರಿಗೆ ರೇಡಿಯೊ ಬಲು ದೊಡ್ಡ ಗೆಳೆಯನಾಗುತ್ತದೆ. ಆ ವರ್ಕ್‌ಶಾಪ್‌ನಲ್ಲಿಯೂ ಇಡೀ ದಿನ ರೇಡಿಯೊ ಹಾಡುತ್ತಿರುತ್ತಿತ್ತು. ಈ ಮನಸ್ಥಿತಿಯಲ್ಲಿ ಇದ್ದಾಗಲೆ, ಒಂದು ದಿನ ರೇಡಿಯೋದಲ್ಲಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಮ್ ಅವರ ಭಾಷಣದ ಕೆಲವು ಪ್ರೇರಣೆಯ ಪಂಕ್ತಿಗಳು ಕೇಳಿಸಿದವು:

ಇಂತಜಾರ್ ಕರನೇವಾಲೆ ಹಾಥೋ ಮೇ ಉತನಾ ಹೀ ಆತಾ ಹೈ

ಜಿತನಾ ಕೋಶಿಶ್ ಕರನೇವಾಲೇ ಛೋಡ್ ದಿಯಾ ಕರತೆ ಹೈ

(ಕಾಯುತ್ತಾ ಕುಳಿತ ಕೈಗಳಿಗೆ ಅಷ್ಟೇ ಸಿಗುವುದು, ಪ್ರಯತ್ನ ಮಾಡುವವರು ಬಿಟ್ಟದ್ದು)

ಆ ಮಾತು ಭಾವೇಶ್ ಅವರನ್ನು ಎಲ್ಲಿಲ್ಲದ ಹಾಗೆ ಪ್ರಭಾವಿಸಿತು. ಕಲಾಮರ ಆ ಮಾತುಗಳಲ್ಲಿ ಬಲು ದೊಡ್ಡ ಸಂದೇಶವನ್ನು ಅವರು ಕಂಡರು. ಇದೇ ಅವರ ಗುರುಮಂತ್ರವಾಯಿತು. ಯಾರೋ ಬಂದು ಸಹಾಯ ಮಾಡುತ್ತಾರೆಂದು ಕಾಯುತ್ತಾ ಕೂರುವುದಲ್ಲ; ಎದುರಿಗಿದ್ದ ಸಮಸ್ಯೆಗಳಿಗೆ